# ವೀಣೆಯ ಇತಿಹಾಸ ಮತ್ತು ಬೆಳವಣಿಗೆ

ಶ್ರೀ ಲಕ್ಷ್ಮಿ ಹೆಚ್. ಎಸ್.

ಅತಿಥಿ ಉಪಾನ್ಯಾಸಕರು

ವೀಣಾ ವಾದನ ವಿಭಾಗ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದಾಲಯ

ಮೈಸೂರು, ಕರ್ನಾಟಕ, ಭಾರತ

## ಅಮೂರ್ತ

ಭಾರತೀಯ ಸಂಗೀತ ವಾದ್ಯಗಳಲ್ಲಿ ವೀಣೆಗೆ ಸರಿಸಮನಾದದು ಬೇರೊಂದು ಇಲ್ಲ. ಇದು ಹಿಂದಿನ ಕಾಲದಿಂದ ಭಾರತೀಯ ಸಂಗೀತದ ಮಾರ್ಗದರ್ಶಕ ನಕ್ಷತ್ರವಾಗಿದೆ. ಬಹಳ ಪುರಾತನ ಕಾಲದಲ್ಲಿ ಮಾನವನು ಬೇಟೆಯಾಡಲು ಬಾಣಪ್ರಯೋಗ ಮಾಡಿದಾಗ ಬಿಲ್ಲಿನಿಂದ ಹೊರಟ ಮಧುರವಾದ ಘೋಷವೂ ವೀಣೆಯನ್ನು ರೂಪಿಸಲು ಪ್ರಚೋದಿಸಿತು.

ವೀಣೆಯಲ್ಲಿ ಹಲವು ವಿಧಗಳಿವೆ. ನಕುಲ, ಕಿನ್ನರಿ, ಚಿತ್ರ, ಪರಿವಾದಿನಿ, ವಿಪಂಚಿ ಮುಂತಾದವು. ಸರಸ್ವತಿ ದೇವಿಯು ಕಚ್ಛಪಿ ಎಂಬ ವೀಣೆಯನ್ನು ಮತ್ತು ನಾರದರು ಮಹತೀ ಎಂಬ ವೀಣೆಯನ್ನು ನುಡಿಸುತ್ತಿದ್ದರಿಂದ ಉಲ್ಲೇಖವಿದೆ. ಅನೇಕ ಲಾಕ್ಷಣಿಕರು ತಮ್ಮ ಲಕ್ಷಣ ಗ್ರಂಥದಲ್ಲಿ ವೀಣೆಯ ಬಗ್ಗೆ ಒಂದು ಅಧ್ಯಾಯವನ್ನೇ ರಚಿಸಿದ್ದಾರೆ.

ಸುಮಾರು ೧೨ನೇ ಶತಮಾನದವರೆಗೆ ವೀಣೆಯು ಬೆರಳುಗಳಿಂದ ಅಥವಾ ಕಡ್ಡಿಗಳಿಂದ, ಕಮಾನುಗಳಿಂದ ನುಡಿಸಲಾಗುತ್ತಿತ್ತು. ನಂತರ ೧೬ನೇ ಶತಮಾನದಲ್ಲಿ ಪ್ರಗತಿಪಥದಲ್ಲಿ ಸಾಗಿದ ವೀಣೆಯು ೧೭ನೇ ಶತಮಾನದಲ್ಲಿ ಗೋವಿಂದ ದೀಕ್ಷಿತ ರಿಂದ ಈಗಿನ ವೀಣೆಯ ರೂಪ ಪರಿಪಕ್ವವಾಗಿ ಮೂಡಿಬಂದಿತು.

**ಮೂಲಪದಗಳು** – ವೀಣೆ, ಕರ್ನಾಟಕ ಸಂಗೀತ, ವಾದ್ಯ, ಇತಿಹಾಸ ಮತ್ತು ಬೆಳವಣಿಗೆ

## ಪೀಠಿಕೆ

ವೀಣೆಯು ಒಂದು ಅನಾದಿಕಾಲದ ಅಂದರೆ ವೇದ ಪುರಾಣದ ಕಾಲದಿಂದ ಪ್ರಚಲಿತವಾದ ವಾದ್ಯವಾಗಿದೆ. ಅದರ ವೇದಕಾಲದಿಂದ ಈಗಿನ ವೀಣೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ತಸ್ಮಾನ್ನಿರೂಪ್ಯೈಕೆ ವೀಣಾ ಲಕ್ಷ್ಮಲಕ್ಷ್ಮ್ಯಾನು ಸಾರತಃ

ದಂಡಃ ಶಂಭುರುಮಾ ತಂತ್ರೀ ಕಕುಬಃ ಕಮಲಾಪನೇಃ

ಇಂದಿರಾ ಪತ್ರಿಕಾಬ್ರಹ್ಮ ತುಂಭೋ ನಾಭಿಃ ಸರಸ್ವತಿ

ದೊರಕೋ ವಾಸುಕಿರ್ಜೀವಾ ಸುಧಾಂಶುಃ ಸಾರಿಕಾರವಿಃ

ಸರ್ವದೇವಮಯಿ ತಸ್ಮದ್ವಿ ಣೀಯಂ ಸರ್ವಮಂಗಲಾ

ಪುನೀತೋ ವಿಪ್ರಹತ್ಯಾದಿ ಪಾತಕೈಃ ಪತಿತಂ ಜನಂ

ದರ್ಶನ ಸ್ಪರ್ಷನೇ ಚಾಸ್ಯ ಭೋಗ ಸರ್ವಾಪವರ್ಗದೆ

ಇತಿ ಸಂಗೀತ ನಿಪುಣೈರ್ಮುನಿಭಿರ್ಭರತಾದಿಭಿಃ

ವೀಣಾ ಪ್ರಶಂಸಿತಾ ತಸ್ಮಾತ್ ಶ್ಲಾಘನೀಯತಮಾಮತ

ಧರ್ಮಾರ್ಥ ಕಾಮಮೋಕ್ಷಣಾಮಿಯಮ್ಮೃವಹಿ ಸಾಧನಂ

ಸ್ವರಮೇಳಕಲಾನಿಧಿ

ಈ ಶ್ಲೋಕವು ವೀಣೆಯ ಮಹತ್ತ್ವವನ್ನು ವರ್ಣಿಸುತ್ತಿದ್ದು, ಅದರ ದೈವಿಕತೆಯನ್ನು ನಿರೂಪಿಸುತ್ತದೆ. ಶ್ಲೋಕದ ಅರ್ಥವು

**ವೀಣೆ**ಯು ಲಕ್ಷ್ಮಿಯ ಸ್ವರೂಪವಿದೆ, ಅದು ಶಂಭು (ಶಿವ), ಉಮಾ (ಪಾರ್ವತಿ), ಮತ್ತು ಕಮಲಾಸನ (ಬ್ರಹ್ಮ) ಆಧಾರವನ್ನು ಹೊಂದಿರುವ ವಾದ್ಯವಾಗಿದೆ. ವೀಣೆಯ ದಂಡವು ಶಂಭುನೆಂದು, ತಂತಿ ಉಮೆಯೆಂದು, ಕಕುಬು (ವಿವಿಧ ದಿಕ್ಕುಗಳು) ಕಮಲಾಪತಿ (ವಿಷ್ಣು)ಯೆಂದು, ಇಂದಿರಾ (ಲಕ್ಷ್ಮಿ) ಯು ಪತ್ರಿಕೆಯಲ್ಲಿ ಪ್ರತಿಷ್ಠಿತವಾಗಿದೆ.

ಬ್ರಹ್ಮನು ತುಂಭವನ್ನು ಸೂಚಿಸುತ್ತಿದ್ದಾನೆ, ನಾಭಿ ಸರಸ್ವತಿಯಾಗಿದೆ, ವೀಣೆಯ ದೋರು ವಾಸುಕಿ (ನಾಗ)ಯನ್ನು ಪ್ರತಿನಿಧಿಸುತ್ತದೆ, ಮತ್ತು ಜೀವವೆಂದರೆ ಚಂದ್ರನು. ಸಾರಿಕಾ (ಹಾಡುವ ಪಕ್ಷಿ) ವೀಣೆಯ ಕಡೆಯ ಪಾತ್ರವಿದೆ. ವೀಣೆಯು ಸರ್ವ ದೇವತಾಮಯಿಯಾಗಿದ್ದು, ಎಲ್ಲಾ ಮಂಗಳದಾಯಕವಸ್ತುವಾಗಿದೆ.

ವೀಣೆಯ ದರ್ಶನ ಮತ್ತು ಸ್ಪರ್ಶದಿಂದ, ಪಾತಕಗಳನ್ನು ನಾಶ ಮಾಡಬಲ್ಲದು ಮತ್ತು ಆನಂದದಾಯಕ ಅನುಭವವನ್ನು ನೀಡಬಲ್ಲದು. ಸಂಗೀತ ನಿಪುಣರಾದ ಮುನಿಗಳು ಇದನ್ನು ಶ್ಲಾಘಿಸಿದ್ದಾರೆ, ಅದನ್ನು ಧರ್ಮ, ಅರ್ಥ, ಕಾಮ, ಮೋಕ್ಷಗಳ ಸಾಧನವಾಗಿಯೂ ಪರಿಗಣಿಸಿದ್ದಾರೆ. (Rajarao, Retrieved October 22, )

ಈ ಶ್ಲೋಕವು ವೀಣೆಯ ದಿವ್ಯತೆಯನ್ನು ಸಾರುತ್ತಿದ್ದು, ಮನುಷ್ಯರ ಜೀವನದಲ್ಲಿ ಅದರ ಸಾಂಸ್ಕೃತಿಕ, ಧಾರ್ಮಿಕ, ಮತ್ತು ಅಧ್ಯಾತ್ಮಿಕ ಮಹತ್ವವನ್ನು ವರ್ಣಿಸುತ್ತದೆ.

## ಸಾಹಿತ್ಯ ವಿಮರ್ಶೆ

ವೀಣೇಯು ವೇದಕಾಲದಿಂದಲೂ ಪ್ರಚಲಿತದಲ್ಲಿದ್ದಂತ ವಾದ್ಯ. ವೀಣೆಯ ರಚನಾಕ್ರಮ, ಪ್ರಾಚೀನ ವೀಣೆಯ ರಚನೆ ಹಾಗೂ ಅದರ ಬೆಳವಣಿಗೆ, ಶ್ರುತಿ ಮಾಡುವ ಬಗ್ಗೆ, ವೀಂಎಯ ವಿಧಗಳು ಇವೆಲ್ಲದರ ವಿವರಗಳು “ಕರ್ನಾಟಕ ಸಂಗೀತ ಸುಧಾ” ಎಂಬ ಲಕ್ಷಣಗ್ರಂತದಿಂದ

ಲಭ್ಯವಾಗಿದೆ. ಈ ಮೇಲಿನ ಲಕ್ಷಣಗ್ರಂಥದ ಲಾಕ್ಷಣಿಕರು ಡಾ. ವಿ. ಎಸ್. ಸಂಪತ್ಕುಮಾರಾಚಾರ್ಯ ಹಾಗೂ ಪ್ರೊ. ಪಿ. ರಾಮರತ್ನಂ.

ಈ ಮೇಲಿನ ಲಕ್ಷಣಗ್ರಂಥದಿಂದ ಈ ಶೀರ್ಷಿಕೆಗೆ ಉತ್ತಮ ವಿಷಯಗಳು ಲಭ್ಯವಾಗಿದೆ.

## ಲೇಖನದ ಮುಖ್ಯ ವಿವರಣೆ

ವೀಣೆಯ ಬಗ್ಗೆ ವಿವರಿಸುವಂತೆ ಇದು ವೇದಗಳ ಕಾಲದಿಂದಲೂ ಪ್ರಚಲಿತದಲ್ಲಿದೆ. ಬಾನ ಎಂಬುದು ನೂರು ತಂತಿಗಳನ್ನು ಹೊಂದಿ ವೇದ ಮಂತ್ರ ಪಠಣೆಯಲ್ಲಿ ಸಹಾಯಕ ವಾದ್ಯವಾಗಿ ನುಡಿಸಲ್ಪಡುತ್ತಿತ್ತು ಎಂದು ಋಗ್ವೇದ ಸಾಹಿತ್ಯದಲ್ಲಿ ತಿಳಿಸುತ್ತದೆ. ಸಾಮವೇದ ಮತ್ತು ಎಜುರ್ವೇದ ಕಾಲದಲ್ಲಿ ವಾದ್ಯ ಮತ್ತು ನೃತ್ಯಗಳ ನೊಳಗೊಂ ಡು ಪ್ರಯೋಗಿಸಲ್ಪಡುತ್ತಿತ್ತು ಎಂದು ತಿಳಿಯಲ್ಪಡುತ್ತದೆ. ನಂತರ ಶ್ಯಾಮಲಾ ದಂಡಕದಲ್ಲಿ ಮಹಾಕವಿ ಕಾಳಿದಾಸನು ಮಾಣಿಕ್ಯ ವೀಣಾ ಮತ್ತು ವಾಲ್ಲಶಿ ಎಂಬ ವೀಣೆಯನ್ನು ಹೆಸರಿಸಿದ್ದಾರೆ. ಭಾಸ ಕವಿಯು ಸ್ವಪ್ನ ವಾಸವದತ್ತ ನಾಟಕದಲ್ಲಿ ಉದಯನ ಮಹಾರಾಜನು ಘೋಷವತಿ ಎಂಬ ವೀಣೆಯನ್ನು ನುಡಿಸಿ ಆನೆಯನ್ನು ಹಿಡಿಯುತ್ತಿದ್ದರಿಂದ ವಿವರಿಸಿದ್ದಾರೆ. ಸರಸ್ವತಿ ದೇವಿಯು ಕಚ್ಚತಿ ಎಂಬ ವೀಣೆಯನ್ನು ನಾರದರು ಮಹತೀಯ ಎಂಬ ವೀಣೆಯನ್ನು ಲವಕುಶರು ವಲ್ಲಶಿ ಎಂಬ ವೀಣೆಯನ್ನು ನುಡಿಸಿದರೆ ಎಂಬ ಮಾತನ್ನು ಸ್ಮರಿಸಬಹುದು. ಇದಲ್ಲದೆ ಪ್ರಾಚೀನ ಗ್ರಂಥಗಳು ಕಿನ್ನರಿ ಪಿನಾಕ ರುದ್ರ ವೀಣೆ ಆಕಾಶವೇ ಬ್ರಹ್ಮ ವೀಣೆ ಭುಜಂಗ ವೀಣೆ ರಾವಣ ಹಸ್ತ ವೀಣೆ ಮುಂತಾದ ಹಲವಾರು ಹೆಸರಿನ ವೀಣೆಗಳ ಉಲ್ಲೇಖ ಮಾಡಿದ್ದಾರೆ.

ಪ್ರಾಚೀನದಲ್ಲಿ ವೀಣೆಗಳು ನಾನಾ ರೂಪದಲ್ಲಿ ಕಂಡು ಬಂದರೂ ಮುಖ್ಯವಾಗಿ ಬಿದಿರು ಅಥವಾ ಬೊಂಬಿನ ಉದ್ದವಾದ ದಂಡಿಯನ್ನು ಹೊಂದಿ, ಈ ದಂಡಿಯ ಎರಡು ಕಡೆಯೂ ತಂತಿಯನ್ನು ಬಿಗಿದು ಮರದ ಅಥವಾ ಕೊಂಬಿನ ಮೇರುಗಳ ಮೇಲೆ ಹಾದು ಹೋಗಿ ಅದರಲ್ಲಿ ನಾಸ ಪುಷ್ಠಿಕರಣಕ್ಕಾಗಿ ಸೋರೆ ಬುರುಡೆಯನ್ನು ಸೇರಿಸುತ್ತಿದ್ದರೆಂದು ಅನೇ ಶತಮಾನದಲ್ಲಿ ಕಂಡು ಬರುತ್ತದೆ. ನೂರು ತಂತಿಗಳನ್ನು ಹೊಂದಿದ್ದ ವೀಣೆಯು ತಂತಿಗಳ ಸಂಖ್ಯೆಯಲ್ಲಿ ಇಳುವರಿ ಹೊಂದುತ್ತಾ ಬಂದು ಎರಡು ತಂತಿಗಳ ನಕುಲ, ಮೂರು ತಂತಿಗಲ ಕಿನ್ನರಿ, ಏಳು ತಂತಿಗಳ ವಿಪಂಚೀ ಎಂದು ತಂತಿಗಳ ವ್ಯತ್ಯಾಸವನ್ನು ವಿವರಿಸುತ್ತದೆ.

ಸುಮಾರು ೧೨ನೇ ಶತಮಾನದ ವರೆಗೆ ವೀಣೆಯು ಬೆರಳುಗಳಿಂದ ಅಥವಾ ಕಡ್ಡಿಗಳಿಂದ, ಕಮಾನುಗಳಿಂದ ನುಡಿಸಲ್ಪಡುತ್ತಿತ್ತು. ೧೨ನೇ ಶತಮಾನದ ಬಸವಣ್ಣನವರು ತಮ್ಮ ವಚನದಲ್ಲಿ "ಎನ್ನಕಾಯುವ ದಂಡಿಗೆಯ ಮಾಡಯ್ಯ ,ಎನ್ನ ಶಿರವ ಸೋರೆಯ ಬೂಡಯ್ಯ, ಎನ್ನ ನರವ ತಂತಿ ಮಾಡಯ್ಯ, ಎನ್ನ ಬೆರಳ ಕಡ್ಡಯ ಮಾಡಯ್ಯ ಎಂದು ವರ್ಣಿಸಿದ್ದಾರೆ. ೧೨ನೇ ಶತಮಾನದಲ್ಲಿ ವೀಣೆಗೆ ಮೆಟ್ಟಿಲುಗಳಿತ್ತವೆಂದು, ಇದಕ್ಕೂ ಮೊದಲು ಮೆಟ್ಟಿಲು ಇಲ್ಲದ ವೀಣೆಯು ಬಳಸಲ್ಪಟ್ಟಿತ್ತೆಂದು ಹೇಳಬಹುದು. ವೇದ ಕಾಲದಲ್ಲಿ ರೂಪಿತವಾದ ವೀಣೆಗೆ ದರ್ಭೆಯಲ್ಲಿ ಹೊಸೆದ ತಂತಿಯನ್ನು ಬಳಸಿತ್ತಿದ್ದರೆಂದು ತಿಳಿಯಲ್ಪಟ್ಟಿದೆ. ಕ್ರಮೇಣ ನಾದ ಪುಷ್ಠಿಗೆ ಸೋರೆ ಬುರುಡೆಯ ಬದಲಾಗಿ ಮರದ ಕುಂಭಗಳನ್ನು ಮಾಡಿದ ಮೆಟ್ಟಲನ್ನು ಹೊಂದಿ ಇತ್ತೀಚೆಗೆ ಲೋಹದ ಮೆಟ್ಟಿಲನ್ನಯ ವೀಣೆಗೆ ಗಳಸಲ್ಪಟ್ಟಿದೆ.

೧೫ನೇ ಶತಮಾನಕ್ಕೆ ಸೇರಿದ ನಿಜಗುಣ ಶಿವಯೋಗಿಗಳು ರಚನೆಯಲ್ಲಿ

ಯೋಗಿ ನಿಜಾನಂದದೊಳು ನುಡಿಸುವ ವೀಣೆ

ರಾಗರಸದ ತರಂಗಿಣಿ ನೋಡು ರಮಣಿ

ಈ ರಚನೆಯಲ್ಲಿ ವೀಣೆಗೆ ೧ ದಂಡಿ, ಎರಡು ಕಾಯಿಗಳು, ಏಳು ತಂತಿಗಳು, ಏಳು ಬಿರಡೆಗಳು, ಹದಿನಾರು ಮೆಟ್ಟಿಲುಗಳು ಇದ್ದವೆಂದು ತಿಳಿದುಬರುತ್ತದೆ.

ನಂತರ ೧೬ನೇ ಶತಮಾನದಲ್ಲಿ ಪ್ರಗತಿಪಥದಲ್ಲಿ ಸಾಗಿದ ವೀಣೆಯು ೧೭ನೇ ಶತಮಾನದಲ್ಲಿ ಗೋವಿಂದ ದೀಕ್ಷಿತರಿಂದ ಈಗಿನ ಬಳಸುವ ವೀಣೆ ರೂಪ ಪರಿಪಕ್ವವಾಗಿ ಮೂಡಿ ಬಂದಿದೆ.

ಅದರಂತೆ ಒಂದೇ ತಂತಿಯಲ್ಲಿ ಎರಡು ಸಪ್ತಕಗಳನ್ನು ನುಡಿಸಲು ಸಾಧ್ಯವಾಗುವಂತೆ, ಸರ್ವರಾಗಗಳನ್ನು ನುಡಿಸಲು ಅನುವಾಗುವಂತೆ, ಮೆಟ್ಟಿಲುಗಳನ್ನು ೨೪ಕ್ಕೆ ಏರಿಸಿ ವೀಣೆಯ ಸಂಪೂರ್ಣತೆಯನ್ನು ಒದಗಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. (Ramarathnam, 1967)

ಅಲ್ಲದೆ ಸಂಗೀತ ತ್ರಿಮೂರ್ತಿಗಳು ದಶವಿಧದ ಗಮಕಗಳಿಗಿಂತ ಹೆಚ್ಚು ಗಮಕಗಳನ್ನು ಈ ವಾದ್ಯದಲ್ಲಿ ನುಡಿಸಬಹುದೆಂದು ತಿಳಿಸಿ, ಪಂಚದಶ ಗಮಕ ಪ್ರಯೋಗವನ್ನು ಈ ವಾದ್ಯದಲ್ಲಿ ನುಡಿಸಬಹುದೆಂದು ತಿಳಿಸಿದ್ದಾರೆ. ಮುಂದಿನ ಬೆಳವಣಿಗೆಯಲ್ಲಿ ರಾಗಾಲಾಪನ ಪದ್ಧತಿಯನ್ನು ಮತ್ತು ತಾನವನ್ನು ವಿಶಿಷ್ಟ ರೀತಿಯಲ್ಲಿ ನುಡಿಸಲು ಬಳಸುವಂತೆ ಪ್ರಖ್ಯಾತಹೊಂದಿ ವೀಣೆಯು ತನ್ನದೇ ಆದ ಛಾಪನ್ನು ಕರ್ನಾಟಕ ಸಂಗಿತದಲ್ಲಿ ಮೂಡಿಸಿದೆ.

ಮೊದಲು ಊರ್ಧ್ವಮುಖವಾಗಿ ನುಡಿಸುತ್ತಿದ್ದ ವೀಣೆಯನ್ನು ಅಡ್ಡವಾಗಿ ತೊಡೆಯ ಮೇಲೆ ನುಡಿಸಲು ಆಗುವಂತೆ ಮಾಡಿದ ಮೊದಲ ಕೀರ್ತ ವೀಣೆ ಶೇಷಣ್ಣನವರಿಗೆ ಸಲ್ಲುತ್ತದೆ. ಅದ ರಂತೆ ಈಗಲೂ ಈ ಕ್ರಮದಲ್ಲಿಯೇ ನುಡಿಸಲ್ಪಡುತ್ತದೆ.

ಈ ಲೇಖನಿಯ ಸಂಶೋಧನೆಯ ಪ್ರಕಾರ ಒಂದೇ ವೀಣೆಯನ್ನು ಅನೇಕರು ನುಡಿಸಿದರೂ ಅದರಲ್ಲಿ ಅವರ ಶಾರೀರಿಕ ಶಕ್ತಿಯನ್ನನುಸರಿಸಿ ಬೇರೆ ಬೇರೆ ರೀತಿಯ ನಾದೋತ್ಪತ್ತಿ ಆಗುತ್ತದೆ. ಅದು ಬಹಳ ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರ ಗೋಚರವಾಗುತ್ತದೆ. ಮತ್ತು ಒಂದು ಕೋಣೆಯಲ್ಲಿ ಒಂದೇ ಒಂದು ಸಣ್ಣ ದೀಪವಿರಿಸಿ ನುಡಿಸಿದರೆ ಬರುವ ನಾದಕ್ಕೂ, ತುಂಬಾ ಬೆಳಕು ಚೆಲ್ಲುವ ದೀಪಗಳನ್ನು ಇರಿಸಿ ನುಡಿಸಿದರೆ ಬರುವ ನಾದಕ್ಕೂ, ಹತ್ತಾರು ಜನರು ಕೇಳುವಲ್ಲಿ ಬರುವ ನಾದಕ್ಕೂ ಬಹಳ ವ್ಯತ್ಯಾಸವನ್ನು ಗುರುತಿಸಬಹುದು.

ನಂತರ ಸೀಮಂತ ಶಾಸ್ತ್ರದಲ್ಲಿ ವೀಣಾವಾದನವನ್ನು ನಡೆಸುತ್ತಾರೆ. ಅದರಂತೆ ೮ನೇ ತಿಂಗಳು ತಾಯಿಯ ಗರ್ಭದಲ್ಲಿರುವಾಗ ಮಗುವಿನ ಶ್ರವಣಕ್ಕೆ ವೀಣಾವಾದನದ ತರಂಗದ ಮೂಲಕ ಹರಿಯುವ ಧ್ವನಿಯನ್ನು ಮಗುವು ಗುರುತಿಸುತ್ತದೆ ಎಂದು ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ. ಈ ಮೂಲಕ ವೀಣೆಯು ಎಷ್ಟು ಮಹತ್ವವನ್ನು ಹೊಂದಿದೆ ಎಂದು ತಿಳಿಯಬಹುದು.

## ಸಮಾರೋಪ

ವೀಣೇಯ ಮಹತ್ವವನ್ನು ಪ್ರಾಚೀನ ಕಾಲದಿಂದಲೂ ಹೇಳಲಾಗಿದೆ. "ವೀಣಾವಾದನ ತತ್ವಜ್ಞಃ ಶೃತಿ ಜಾತಿ ವಿಶಾರದ" ವೀಣಾವಾದನದಲ್ಲಿ ಪರಿಣಿತನಾದವನು ಶೃತಿ ಜಾತಿ ವಿಶಾರದನಾಗಿ ಮೋಕ್ಷ ಹೊಂದುತ್ತಾನೆ ಎಂದರ್ಥ.

ವೇದ ಕಾಲದಲ್ಲಿ ರೂಪಿತವಾದಂತಹ ವೀಣೆಗೆ ದರ್ಭೆಯಲ್ಲಿ ಹೊಸೆದು ತಂತಿಯಂತೆಯೂ ಅಥವಾ ಪ್ರಾಣಿಗಳ ನರಗಳನ್ನು ತಂತಿಯಾಗಿಯೂ ಉಪಯೋಗಿಸುತ್ತಿದ್ದರೆಂದು

ತಿಳಿಯಲ್ಪಡುತ್ತದೆ. ನಂತರ ಲೋಹದ ತಂತಿಗಳನ್ನು ಬಳಸಲು ಪ್ರಾರಂಭಿಸಿದರು. ಇದರಿಂದ ಪ್ರಾರಂಭವಾಗಿ ಸುಮಾರು ೧೬ನೇ ಶತಮಾನದಲ್ಲಿ ಪ್ರಗತಿಪಥದಲ್ಲಿ ಸಾಗಿದ ವೀಣೆಯು ೧೭ನೇ ಶತಮಾನದಲ್ಲಿ ಗೋವಿಂದ ದೀಕ್ಷಿತರಿಂದ ಈಗಿನ ಗಳಸುವ ವೀಣೆಯ ರೂಪಗೊಂಡಿತು ಎಂದು ತಿಳಿದುಬಂದಿದೆ.

ಈ "ವೀಣೆಯ ಇತಿಹಾಸ ಮತ್ತು ಬೆಳವಣಿಗೆ" ಲೇಖನಿಯಿಂದ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು. ವಿವಿಧ ವೀಣೆಹಳ ರಚನಾಕ್ರಮ, ನುಡಿಸುವ ರೀತಿ, ಉಪಯೋಗಿಸಿರುವ ವಸ್ತುಗಳು ಇವುಗಳ ಬಗ್ಗೆಯೂ ತಿಳಿಸಲಾಗಿದೆ.

## ಉಲ್ಲೇಖಗಳು


1. Rajarao, L. (n.d.). *Sangita Sastra Candrike*. MusicResearchLibrary. Retrieved October 22, 2024, from https://musicresearchlibrary.net/omeka/items/show/1305.
2. Ramarathnam, M. V., & Sampathkumaracharya, V. S. (1967). *Karnataka Sangeetha Sudha*. University of Mysore, Prasaranga Publication.